ಗಣಕೀಕರಣ

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **902**
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

*****

	ಪ್ರಶ್ನೆ	ಉತ್ತರ
ಅ)	ಔರಾದ್ ಪಟ್ಟಣದ ಹೊರವಲಯದಲ್ಲಿ 110/11 ಕೆ.ವಿ ಸಾಮರ್ಥ್ಯದ ವಿದ್ಯುತ್ ವಿತರಣೆ ಕೇಂದ್ರಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; ಈ ಕಾಮಗಾರಿ ಯಾವ ಹಂತದಲ್ಲಿದೆ ಹಾಗೂ ಯಾವ ಏಜೆನ್ಸಿಗೆ ನೀಡಲಾಗಿದೆ; (ವಿವರವಾದ ಮಾಹಿತಿ ನೀಡುವುದು) ಈ ಕಾಮಗಾರಿ ಕಳಪೆ ಮಟ್ಟದಲ್ಲಿ ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಔರಾದ್‌ನಲ್ಲಿರುವ 33/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನು 110/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನಾಗಿ ಉನ್ನತೀಕರಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು ಮುಕ್ತಾಯ ಹಂತದಲ್ಲಿದೆ. ಇದರ ವಿಸ್ತೃತ ಯೋಜನಾ ವರದಿಯ ಮೊತ್ತ ರೂ.8.88 ಕೋಟಿಗಳಾಗಿರುತ್ತದೆ. ಕವಿಪ್ರನಿನಿಯ ಬಂಡವಾಳ ವೆಚ್ಚ ಕಾಮಗಾರಿಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ನೀಡುವುದಿಲ್ಲ. ಕ.ವಿ.ಪ್ರ.ನಿ.ನಿ.ಯು ತನ್ನ ಆಂತರಿಕ ಸಂಪನ್ಮೂಲ ಹಾಗೂ ಸಾಲಗಳ ಮೂಲಕ ಕಾಮಗಾರಿಗಳನ್ನು ಕೈಗೊಳ್ಳುತ್ತಿದೆ. ಸದರಿ ಕಾಮಗಾರಿಯನ್ನು ಗುತ್ತಿಗೆದಾರರಾದ ವಿ.ಆರ್.ಪಾಟೀಲ್, ವಿ.ವಿ.ಎನ್.ಎಲ್.ಪ್ರೈ.ಲಿಮಿಟೆಡ್, ಮುನಿರಾಬಾದ್ ರವರಿಗೆ ನೀಡಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಉಪಯೋಗಿಸುತ್ತಿರುವ ಎಲ್ಲಾ ಸಾಮಗ್ರಿಗಳನ್ನು ಕ.ವಿ.ಪ್ರ.ನಿ.ನಿ. ಅನುಮೋದಿತ ಮಾರಾಟಗಾರರಿಂದ ಖರೀದಿಸಲಾಗಿದ್ದು, ಕವಿಪ್ರನಿನಿ. ವಿದ್ಯುತ್ ಪರಿವೀಕ್ಷಕ ಮತ್ತು ಕವಿಪ್ರನಿನಿಯ ತಾಂತ್ರಿಕ ಪರಿಶೋಧನೆ ಮತ್ತು ಗುಣನಿಯಂತ್ರಣ ಶಿಷ್ಟ ಮಾನಕದಂತೆ ಕಾರ್ಯ ಪ್ರಗತಿಯಲ್ಲಿದ್ದು, ಯಾವುದೇ ಕಳಪೆ ಕಾಮಗಾರಿ ಕಂಡು ಬಂದಿರುವುದಿಲ್ಲ.
ಆ)	ಔರಾದ್ ತಾಲ್ಲೂಕಿನಾದ್ಯಂತ ವಿದ್ಯುತ್ ವ್ಯವಸ್ಥೆ ಸುಧಾರಿಸಿದೆಯೇ; ಇಲ್ಲದಿದ್ದಲ್ಲಿ, ಸುಧಾರಿಸುವುದು ಯಾವಾಗ; ದೊಡ್ಡ ಹೋಬಳಿಯಲ್ಲಿ 110 ಕೆ.ವಿ ಸಣ್ಣ ಹೋಬಳಿಯಲ್ಲಿ 33 ಕೆ.ವಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲಾಗುವುದೇ; ಸ್ಥಾಪಿಸುವುದಾದರೆ ಯಾವಾಗ? (ವಿವರವಾದ ಮಾಹಿತಿ ನೀಡುವುದು)	ಔರಾದ ತಾಲ್ಲೂಕಿನಾದ್ಯಂತ ನೀರಾವರಿ ಪಂಪಸೆಟ್‌ಗಳಿಗೆ 7 ಗಂಟೆಗಳ ಕಾಲ 3ಫೇಸ್ ವಿದ್ಯುತ್ ಸರಬರಾಜು ಹಾಗೂ ಇತರೆ ಎಲ್ಲಾ ಕೃಷಿಯೇತರ ಫೀಡರ್ ಗಳಿಗೆ 22 ರಿಂದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಈಗಾಗಲೇ ಔರಾದ್ ತಾಲ್ಲೂಕಿನ ಕಮಲನಗರ, ಸಂತಪೂರ ಮತ್ತು ಡೋಂಗರಗಾಂವ ಹೋಬಳಿಗಳಲ್ಲಿರುವ 110 ಕೆವಿ ವಿದ್ಯುತ್ ಉಪಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಇವುಗಳನ್ನು ಹೊರತುಪಡಿಸಿ 33 ಕೆವಿ ಕಮಲನಗರ, ಖೇರ್ಡಾ, ವಡಗಾಂವ್ ವಿದ್ಯುತ್ ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

...2

		ಪ್ರಸ್ತುತ ಔರಾದ ಪಟ್ಟಣದ ಹೊರವಲಯದಲ್ಲಿ 110/11 ಕೆವಿ ವಿದ್ಯುತ್ ಕೇಂದ್ರದ ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ ಮತ್ತು ಸಂತಪೂರ ಹೋಬಳಿ ಮಟ್ಟದಲ್ಲಿ 220/110/11 ಕೆವಿ ವಿದ್ಯುತ್ ಉಪಕೇಂದ್ರ ಮಂಜೂರಾಗಿದ್ದು, ಟೆಂಡರ್ ಕರೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಹೊಸದಾಗಿ ನಿರ್ಮಾಣ ಹಂತದಲ್ಲಿರುವ 33 ಕೆವಿ ಖಾಶೆಂಪೂರ ವಿದ್ಯುತ್ ಉಪಕೇಂದ್ರವು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ, ಇದರಿಂದ 15 ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಬಹುದಾಗಿರುತ್ತದೆ. ಇವುಗಳ ಹೊರತು Revamped Distribution Scheme ಯೋಜನೆಯಯಡಿ ಔರಾದ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ರಾಣಾಕುಶನೂರ ಹಾಗೂ ಕೌಠಾ ಗ್ರಾಮಗಳಲ್ಲಿ 33 ಕೆವಿ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ತಾಂತ್ರಿಕ ಸಾಧ್ಯತೆಯ ಪರಿಶೀಲನೆ ಹಂತದಲ್ಲಿವೆ. ಹಾಗಾಗಿ ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜು ಸಮರ್ಪಕವಾಗಿರುತ್ತದೆ.

ಸಂಖ್ಯೆ: ಎನರ್ಜಿ 212 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು.